ಆಧಾರದ ಮೇಲೆ ಈ ಸದನದಲ್ಲಿ ಈ ವಿಚಾರವನ್ನು ಮತಕ್ಕೆ ಹಾಕಿ ಎಂದು ನಾನು ಹೇಳಿದೆ. ಈ ಸರ್ಕಾರಗಳು ರೈತನಿಗೆ ಮೋಸ ಮಾಡಿವೆ, ಆದುದರಿಂದ ಅವನ ಸಾಲ ರದ್ದಾಗಬೇಕಾಗುತ್ತದೆ. ಸರ್ಕಾರಗಳು ರೈತನ ಋಣದಲ್ಲಿವೆ, ಆದಕ್ಕಾಗಿ ನಿಮಗೆ ಧೈರ್ಯ ಇದ್ದರೆ ಆ ವಿಷಯವನ್ನು ಮತಕ್ಕೆ ಹಾಕಿ ಮತ್ತೆ ಏನೂ ಚರ್ಚೆ ಬೇಡ, ನಾನು ಈ ಸದನದಲ್ಲಿ ಆ ವಿಷಯವನ್ನು ಚರ್ಚೆ ಮಾಡುವುದಿಲ್ಲ.

ಅಧ್ಯಕ್ಷರು:- ಚರ್ಚೆ ಬೇಡ ಅಂದರೆ ಸರಿ ಬಿಡಿ, ಈಗ ನಿಲುವಳಿ ಸೂಚನೆ.....

ಶ್ರೀ ಬಿ.ಎಸ್. ಯಡಿಯೂರಪ್ಪ:- ಸದನದ ಕಲಾಪಗಳಿಗೆ ಅಡ್ಡಿ ಮಾಡಲು ನಾನು ಇಷ್ಟಪಡುವುದಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ಪ್ರೊಫೆಸರ್ ನಂಜುಂಡಸ್ವಾಮಿ ಅವರು ನಮ್ಮ ರಾಷ್ಟ್ರೀಯ ರಂಗದ್ದು ಕುತಂತ್ರ ಪ್ರಣಾಳಿಕೆ ಒಪ್ಪಿಕೊಂಡಿದ್ದು ಕುತಂತ್ರ ಎಂದು ಹೇಳಿದ್ದಾರೆ ಅದು ಅವರ ವೈಯಕ್ತಿಕ ಅಭಿಪ್ರಾಯ, ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. ಆದರೆ ಆ ಅಭಿಪ್ರಾಯಕ್ಕೆ ನನ್ನ ಮತ ಇಲ್ಲ. ನಮ್ಮದು ಕುತಂತ್ರ ಇರಲಿಲ್ಲ. ಬಹುಶಃ ಆ ಕಾರಣಕ್ಕಾಗಿ ರಾಷ್ಟ್ರೀಯ ರಂಗದ ಸರ್ಕಾರಕ್ಕೆ ಸಹ ಇಡೀ ದೇಶದ ಜನ ಮತ ಕೊಟ್ಟಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಸದನದ ಸಮಯವನ್ನು ಹಾಳು ಮಾಡಲು ನಾನು ಇಷ್ಟಪಡುವುದಿಲ್ಲ. ಈಗಲಾದರೂ ಸದನದ ಸಮಿತಿಯನ್ನು ಮಾಡಿ. ರೈತರ ಸಾಲ ವಸೂಲಾತಿಗೆ ತಡೆ ಆಜ್ಞೆ ಕೊಡಿ.....

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಸದನದ ಸಮಿತಿ ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಹೊಸ ಯೋಜನೆಯನ್ನು ತೆಗೆದುಕೊಂಡು 10 ಸಾವಿರದೊಳಗೆ ಇರುವ ರೈತರ ಸಾಲ ಮನ್ನಾ ಮಾಡುವಂತಹ ಒಂದು ಕಾರ್ಯಕ್ರಮವನ್ನು ರೂಪಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ ಇಲ್ಲದಿದ್ದರೆ ಈ ಸರ್ಕಾರಕ್ಕೆ ರೈತರ ಸಮಸ್ಯೆ ಬಗ್ಗೆ ಕಳಕಳಿ ಇಲ್ಲ ಎಂದು ಹೇಳಿ, ಸರ್ಕಾರದ ಈ ನೀತಿಯನ್ನು ಪ್ರತಿಭಟನೆ ಮಾಡಿ ಹೊರಗೆ ಹೋಗುತ್ತೇನೆ. ರೈತರ ಸಮಸ್ಯೆಯನ್ನು ನಿವಾರಣೆ ಮಾಡಲು ಸಾಧ್ಯ ಇಲ್ಲ ಎಂದರೆ ಈ ಸರ್ಕಾರ ಶಾಪಕ್ಕೆ ಗುರಿ ಆಗುತ್ತದೆ. ಈ ಸರ್ಕಾರದ ರೈತ ವಿರೋಧಿ ನೀತಿಯನ್ನು ಪ್ರತಿಭಟನೆ ಮಾಡಿ ನಾನು ಸದನದಿಂದ ಹೊರಗಡೆ ಹೋಗುತ್ತೇನೆ

(ಮಾನ್ಯ ಸದಸ್ಯರಾದ ಶ್ರೀ ಯಡಿಯೂರಪ್ಪನವರು ತಮ್ಮ ಪಕ್ಷದ ಸದಸ್ಯರೊಂದಿಗೆ ಸಭಾತ್ಯಾಗ ಮಾಡಿದರು)

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- ಬಿಜೆಪಿ ಸದಸ್ಯರಿಗೆ ಮಾತ್ರ ರೈತರ ಬಗ್ಗೆ ಕಾಳಜಿ ಇರುವುದು...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಒಂದು ನಿಯೋಗವನ್ನು ಕೇಂದ್ರಕ್ಕೆ ತೆಗೆದುಕೊಂಡು ಹೋಗಬಹುದಿತ್ತು. ಇದು ಬಹಳ ಸಣ್ಣ ವಿಷಯ ಅಂತಹ ದೊಡ್ಡದು ಏನಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇವ್ರೊತ್ತು ಮಾನ್ಯ ಮುಖ್ಯಮಂತ್ರಿಗಳ ಮಾತಿನ ಸರಣಿ, ವಾದದ ಸರಣಿ ನೋಡಿದರೆ ಅವರು ಬಹಳ ಸಿಟ್ಟಿನಿಂದ ಇದ್ದಹಾಗೆ ಕಾಣುತ್ತದೆ...

ಅಧ್ಯಕ್ಷರು:- ಸಿಟ್ಟೂ ಇಲ್ಲ ಎಂಥಾದ್ದು ಇಲ್ಲ. ಇವತ್ತು ನೀವು ಸಿಟ್ಟು ಮಾಡಿಕೊಂಡ ಹಾಗೆ ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್:- ನಾವು ದಿನಾ ನೋಡುತ್ತಿದ್ದೇವೆ. ಇದು ಸರಿಯಾದ ನೀತಿ ಅಲ್ಲ ಎಂದು ನಾನೂ ಸಹ ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಬಾಬಾ ಗೌಡ ರುದ್ರಗೌಡ ಪಾಟೀಲ್:- ಮಾನ್ಯ ಅಧ್ಯಕ್ಷರೇ, ರೈತರಿಗೆ ಹೆಚ್ಚು ಅನುಕೂಲ ಮಾಡಿಕೊಡಿ ಎಂದು ಕೇಳುತ್ತಿದ್ದೇವೆ. ಮೆಟ್ರೋ ಬಗ್ಗೆ 15 ನೂರು ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ.

ಅಧ್ಯಕ್ಷರು:- ಅದು ಲಾಂಗ್ ಟರ್ಮ್ ಪಾಲಿಸಿ..

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:- ಈ ಬಗ್ಗೆ ರೈತರು ಯಾರೂ ಚಳುವಳಿ ಮಾಡಿಲ್ಲ. ರೈತರಿಗೆ ಸುಮಾರು 40-50 ಕೋಟಿ ರೂಪಾಯಿ ಹೆಚ್ಚು ಬರಬೇಕು. ಮಾನ್ಯ ಸದಸ್ಯರು ಹೇಳಿದ ಹಾಗೆ ಇಷ್ಟು ಕಾಳಜಿ ಇಲ್ಲ ಎಂದ ಮೇಲೆ ನಾವು ಏಕೆ ಸದನದಲ್ಲಿ ಕುಳಿತುಕೊಳ್ಳಬೇಕು. ನಾನು ಸಹ ಸದನದಿಂದ ಹೊರಗಡೆ ಹೋಗುತ್ತೇನೆ.

(ಮಾನ್ಯ ಸದಸ್ಯರಾದ ಬಾಬಾಗೌಡ ರುದ್ರಗೌಡ ಪಾಟೀಲರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಸಿ.ಬೈರೇಗೌಡ:- ರೈತರ ಸಾಲ ಮನ್ನಾ ಮಾಡಬೇಕು.

(ಗೊಂದಲ)

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಈಗ ನಾನು ತಮ್ಮ ಮುಂದೆ ಸ್ವಲ್ಪ ಹೊತ್ತಿನ ಕೆಳಗೆ ಹೇಳಿದೆ

ಅಧ್ಯಕ್ಷರು:- ನೀವು ಸದನದ ಸಮಿತಿ ಬೇಡ ಎಂದು ಹೇಳಿದಿರಲ್ಲ..

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಒಂದೇ ಒಂದು ವಿಷಯ ಹೇಳಿ ನಾನು ಆಚೆ ಹೋಗುವವನು.

ಅಧ್ಯಕ್ಷರು:- ನೀವೂ ಹೊರಕ್ಕೆ ಹೋಗುತ್ತೀರಾ?

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಒಂದೇ ಒಂದು ವಿಷಯ ಹೇಳಿ ಸಭೆಯಿಂದ ಹೊರಗೆ ಹೋಗುತ್ತೇನೆ. ಧೈರ್ಯ ಇದ್ದರೆ ಮಾನ್ಯ ಸಭಾ ನಾಯಕರು ಈ ವಿಷಯವನ್ನು ಮತಕ್ಕೆ ಹಾಕಲಿ.

(ಮಾನ್ಯ ಸದಸ್ಯರಾದ ಪ್ರೊ. ನಂಜುಂಡಸ್ವಾಮಿಯವರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಮುಖ್ಯಮಂತ್ರಿಗಳು ಹೇಳಿದರು..

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್:- ಇವ್ರೊತ್ತು ಕೇಂದ್ರ ಸರ್ಕಾರದ ಒಂದು ಪ್ರಣಾಳಿಕೆ ಬಗ್ಗೆ ಟೀಕೆ ಮಾಡುತ್ತಿದ್ದರು.

ಅಧ್ಯಕ್ಷರು:- ಅವರು ಕೇಂದ್ರದ ಪ್ರಣಾಳಿಕೆಯನ್ನು ಟೀಕೆ ಮಾಡಲಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಅವರು ವಚನದಂತೆ ನಡೆದುಕೊಳ್ಳಲಿಲ್ಲ, ಮಾಡಲಿಲ್ಲ ಎಂದು ಹೇಳಿದರು..

ಅಧ್ಯಕ್ಷರು:- ಅವರು ವಚನದಂತೆ ನಡೆದುಕೊಳ್ಳಲಿಲ್ಲ ಎಂದೂ ಹೇಳಲಿಲ್ಲ. ಅವರು ಹೇಳದೇ ಇರುವ ವಿಷಯವನ್ನು ನೀವು ಹೇಳುತ್ತಿದ್ದೀರಿ.

ಶ್ರೀ ಬಿ.ಹೆಚ್. ಬನ್ನಿಕೋಡ್:- ರಾಜ್ಯದ ಕಾಂಗ್ರೆಸ್ ಸರ್ಕಾರದವರು ರೈತರ ಸಾಲ ಮನ್ನಾ ಮಾಡಲಿಕ್ಕೆ ಕೇಂದ್ರಕ್ಕೆ ಒತ್ತಾಯ ಮಾಡುತ್ತೇವೆ ಎಂದು....

ಅಧ್ಯಕ್ಷರು:- ಅವರು ಅದನ್ನು ಮಾಡಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಮುಖ್ಯ ಮಂತ್ರಿಗಳು ಇವ್ರೊತ್ತಿನವರೆಗೂ ರೈತರ ಸಾಲ ಮನ್ನಾ ಮಾಡಬೇಕು ಎಂದು ಕೇಳಲಿಲ್ಲ.....

ಅಧ್ಯಕ್ಷರು:- ಒತ್ತಾಯ ಮಾಡಿದ್ದಾರೆ.